
ಕವಿತೆ





**ಸತ್ಯಾನಂದ ಪಾತ್ರೋಟ**

ಕಲೆ: ಎಂ.ಎಸ್. ಮೂರ್ತಿ

# ಮಹಾತ್ಮ ಹುತಾತ್ಮ

ಗಾಂಧಿಯನ್ನು
ಅಲ್ಲಿ ಇಲ್ಲಿ ಹುಡುಕಬೇಡಿ
ಹುಡುಕಬೇಕು
ನಾವು ನಮ್ಮೊಳಗೆ
ಕತ್ತಲಿನಿಂದ
ಬೆಳಕಿನತ್ತ ಪಯಣಿಸುವವರೆಗೆ
ಸಿಕ್ಕನೆಂದರೆ
ಹಂಚಿ ಬಿಡಿ ಅವನನ್ನು
ಒಂದಿಷ್ಟು ಅವರಿವರಿಗೆ

ತನ್ನಲ್ಲಿ ಏನು ಬಚ್ಚಿಟ್ಟುಕೊಳ್ಳದೆ
ಏನೆಲ್ಲ ಹಂಚಿದ
ಬಹುತ್ವ ಭಾರತಕ್ಕೆ
ಕೊನೆಗೂ ನಡೆದೇಬಿಟ್ಟ
ಯಾರಿಗೂ ಭಾರವಾಗದೆ

ಆದಕ್ಕೆ ಅವನು ಮಹಾತ್ಮನಾದ
ಆದರ ತಪ್ಪಿಗೆ ಹುತಾತ್ಮನಾದ
ಇನ್ನೂ ಇದ್ದಾನೆ
ನಮ್ಮ ಮಧ್ಯ ಜೀವಂತ